**All India Radio: Bangalore**
**National Bulletin In Kannada**
**11.12.2025 1.10 pm**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**11.12.2025 1.10 pm**

**<>><><*><><<>**

ಮುಖ್ಯಾಂಶಗಳು

**೧. ಮಣಿಪುರಕ್ಕೆ ಇಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿ**

**೨. ಪೆಟ್ರೋಲ್‌ನಲ್ಲಿ ಎಥೆನಾಲ್ ಮಿಶ್ರಣದಿಂದ ೭೩೬ ಲಕ್ಷ ಮೆಟ್ರಿಕ್ ಟನ್‌ಗಳಷ್ಟು ತಗ್ಗಿದ ಇಂಗಾಲ ಡೈ-ಆಕ್ಸೈಡ್ ಹೊರಸೂಸುವಿಕೆ - ಕೇಂದ್ರ ಸಚಿವ ನಿತಿನ್ ಗಡ್ಕರಿ**

**೩. ದೇಶದ ಗ್ರಾಮೀಣ ಪ್ರದೇಶದ ಶೇಕಡ ೪೨.೨ರಷ್ಟು ಕುಟುಂಬಗಳ ಆದಾಯದಲ್ಲಿ ಹೆಚ್ಚಳ - ನಬಾರ್ಡ್ ಸಮೀಕ್ಷೆಯಲ್ಲಿ ಉಲ್ಲೇಖ**

**೪. ಟಿ-೨೦ ಕ್ರಿಕೆಟ್ ; ಸರಣಿಯ ಎರಡನೇ ಪಂದ್ಯದಲ್ಲಿಂದು ಭಾರತ-ದಕ್ಷಿಣ ಆಫ್ರಿಕಾ ಸೆಣಸು**

**<>><><*><><<>**

ರಾಷ್ಟ್ರಪತಿ ದ್ರೌಪದಿ ಮುರ್ಮು ಇಂದು ಮಣಿಪುರಕ್ಕೆ ಎರಡು ದಿನಗಳ ಭೇಟಿ ನೀಡಲಿದ್ದಾರೆ. ಇಂದು, ರಾಷ್ಟ್ರಪತಿಗಳು ಇಂಫಾಲ್‌ಗೆ ಆಗಮಿಸಲಿದ್ದಾರೆ. ಈ ವೇಳೆ ಅವರು ಸಾಂಪ್ರದಾಯಿಕ ಗೌರವ ರಕ್ಷೆ ಸ್ವೀಕರಿಸಲಿದ್ದಾರೆ. ನಂತರ ಅವರು ಐತಿಹಾಸಿಕ ಮಾಪಲ್ ಕಾಂಗ್ಜೀಬಂಗ್‌ಗೆ ಭೇಟಿ ನೀಡಿ, ರಾಜ್ಯದ ಶ್ರೀಮಂತ ಕ್ರೀಡಾ ಪರಂಪರೆಯನ್ನು ಆಚರಿಸುವ ಪೋಲೋ ಪ್ರದರ್ಶನ ಪಂದ್ಯವನ್ನು ವೀಕ್ಷಿಸಲಿದ್ದಾರೆ. ಸಂಜೆ, ರಾಷ್ಟ್ರಪತಿಗಳು, ಇಂಫಾಲ್‌ನ ಸಿಟಿ ಕನ್ವೆನ್ಷನ್ ಸೆಂಟರ್‌ನಲ್ಲಿ ಮಣಿಪುರ ಸರ್ಕಾರ ಆಯೋಜಿಸಿರುವ ನಾಗರಿಕ ಸ್ವಾಗತ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಪ್ರಾದೇಶಿಕ ಪ್ರಗತಿಯ ಮೇಲೆ ಸರ್ಕಾರ ನಿರಂತರ ಗಮನ ಹರಿಸುತ್ತಿರುವುದನ್ನು ಸೂಚಿಸುವ ಹಲವಾರು ಪ್ರಮುಖ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ಮತ್ತು ಉದ್ಘಾಟನೆ ನೆರವೇರಿಸಲಿದ್ದಾರೆ. ನಾಳೆ, ರಾಷ್ಟ್ರಪತಿಗಳು ಮಣಿಪುರದ ಧೈರ್ಯಶಾಲಿ ಮಹಿಳಾ ಯೋಧರಿಗೆ ಗೌರವ ಸಲ್ಲಿಸಲು ಇಂಫಾಲ್‌ನಲ್ಲಿರುವ ನೂಪಿ ಲಾಲ್ ಸ್ಮಾರಕ ಸಂಕೀರ್ಣಕ್ಕೆ ಭೇಟಿ ನೀಡಿ, ನಂತರ ಅವರು ಸೇನಾಪತಿಗೆ ತೆರಳಲಿದ್ದಾರೆ. ಅಲ್ಲಿ ಅವರು ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಮತ್ತು ಜಿಲ್ಲೆಯ ಅಭಿವೃದ್ಧಿಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿರುವ ವಿವಿಧ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ.

**<>><><*><><<>**

ಪೆಟ್ರೋಲ್‌ನಲ್ಲಿ ಶೇಕಡ ೨೦ರಷ್ಟು ಎಥೆನಾಲ್ ಮಿಶ್ರಣ ಬಳಸುವುದರಿಂದ ಭಾರತದ ಇಂಗಾಲ ಡೈ-ಆಕ್ಸೈಡ್ ಹೊರಸೂಸುವಿಕೆ ೭೩೬ ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಕಡಿಮೆಯಾಗಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ. ಲೋಕಸಭೆಯಲ್ಲಿಂದು ಪ್ರಶ್ನೋತ್ತರ ಅವಧಿಯಲ್ಲಿ ಪೂರಕ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಸಚಿವರು, ಎಥೆನಾಲ್ ಒಂದು ಹಸಿರು ಇಂಧನವಾಗಿದ್ದು, ಇದು ಮಾಲಿನ್ಯವನ್ನು ಕಡಿಮೆ ಮಾಡುತ್ತದೆ ಮತ್ತು ರೈತರ ಆದಾಯವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ ಎಂದು ಹೇಳಿದರು. ಪ್ರಸ್ತುತ ಭಾರತ ವಾರ್ಷಿಕವಾಗಿ ಸುಮಾರು ೨೨ ಲಕ್ಷ ಕೋಟಿ ರೂಪಾಯಿ ಮೌಲ್ಯದ ಪಳೆಯುಳಿಕೆ ಇಂಧನ ಆಮದು ಮಾಡಿಕೊಳ್ಳುತ್ತಿದೆ. ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲು ಭಾರತ, ಪಳೆಯುಳಿಕೆ ಇಂಧನ ಮೂಲಗಳ ಮೇಲಿನ ಆಮದು ಕಡಿಮೆ ಮಾಡಬೇಕಿದೆ ಎಂದು ಸಚಿವ ನಿತಿನ್ ಗಡ್ಕರಿ ಅಭಿಪ್ರಾಯಪಟ್ಟರು.

<>><><*><><<>

ನ್ಯಾಯಾಂಗದಲ್ಲಿ ಕೃತಕಬುದ್ಧಿಮತ್ತೆ ಪರಿಕರಗಳ ಅಳವಡಿಕೆ, ಅಭಿವೃದ್ಧಿ ಮತ್ತು ನಿಯೋಜನೆಗೆ ಸಂಬಂಧಿಸಿದ ಉಪಕ್ರಮಗಳನ್ನು ಮೇಲ್ವಿಚಾರಣೆ ಮಾಡಲು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಸುಪ್ರೀಂಕೋರ್ಟ್‌ನ ಕೃತಕಬುದ್ಧಿಮತ್ತೆ ಸಮಿತಿಯನ್ನು ಪುನರ್ ರಚಿಸಿದ್ದಾರೆ. ಐದು ಸದಸ್ಯರ ಸಮಿತಿಗೆ ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿ ಪಿ.ಎಚ್. ನರಸಿಂಹ ನೇತೃತ್ವ ವಹಿಸಲಿದ್ದಾರೆ. ನ್ಯಾಯ ವಿತರಣೆ ವ್ಯವಸ್ಥೆಯಲ್ಲಿ ದಕ್ಷತೆ, ಪ್ರವೇಶ ಸಾಧ್ಯತೆ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸುವ ಉದ್ದೇಶದಿಂದ ಎಐ ಸಮಿತಿಯನ್ನು ರಚಿಸಲಾಗಿದೆ.

<>><><*><><<>

ಇಂದು ಮಾಜಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿಯವರ ಜನ್ಮ ವಾರ್ಷಿಕೋತ್ಸವ. ಈ ಹಿನ್ನೆಲೆಯಲ್ಲಿ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಗೌರವ ನಮನ ಸಲ್ಲಿಸಿದ್ದಾರೆ. ಭಾರತದ ೧೩ನೇ ರಾಷ್ಟ್ರಪತಿಯಾಗಿದ್ದ ಪ್ರಣಬ್ ಮುಖರ್ಜಿಯವರಿಗೆ ರಾಷ್ಟ್ರಪತಿ ಭವನದಲ್ಲಿಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಪುಷ್ಪನಮನ ಸಲ್ಲಿಸಿದರು. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ, ಪ್ರಣಬ್ ಮುಖರ್ಜಿಯವರು ಉನ್ನತ ರಾಜನೀತಿಜ್ಞ ಮತ್ತು ಅಸಾಧಾರಣ ವಿದ್ವಾಂಸರಾಗಿದ್ದರು. ದಶಕಗಳ ಸಾರ್ವಜನಿಕ ಜೀವನದಲ್ಲಿ ಅಚಲ ಸಮರ್ಪಣೆಯೊಂದಿಗೆ ದೇಶದಕ್ಕೆ ಸೇವೆ ಸಲ್ಲಿಸಿದ್ದರು. ಅವರ ಬುದ್ಧಿಶಕ್ತಿ ಮತ್ತು ಸ್ಪಷ್ಟ ಚಿಂತನೆಯು ದೇಶದ ಪ್ರಜಾಪ್ರಭುತ್ವವನ್ನು ಪ್ರತಿ ಹಂತದಲ್ಲೂ ಶ್ರೀಮಂತಗೊಳಿಸಿತ್ತು ಎಂದು ಹೇಳಿದ್ದಾರೆ. ಪ್ರಣಬ್ ಮುಖರ್ಜಿಯವರ ಜೀವನ ಮತ್ತು ಕೆಲಸಗಳು

ದೇಶದ ಪ್ರಜಾಪ್ರಭುತ್ವ ಪ್ರಯಾಣಕ್ಕೆ ಸ್ಫೂರ್ತಿ ನೀಡುತ್ತಲೇ ಇರುತ್ತದೆ ಎಂದು ಸಚಿವ ಅಮಿತ್ ಶಾ ಹೇಳಿದ್ದಾರೆ.

**<>><><*><><<>**

ನಬಾರ್ಡ್ ಗ್ರಾಮೀಣ ಆರ್ಥಿಕ ಸಮೀಕ್ಷೆಯು ಗ್ರಾಮೀಣ ಬೇಡಿಕೆಯಲ್ಲಿ ಬಲವಾದ ಮತ್ತು ವಿಶಾಲ ಪುನರುಜ್ಜೀವನವನ್ನು ತೋರಿಸಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ. ಸಮೀಕ್ಷೆಯ ಎಂಟನೇ ಸುತ್ತಿನ ವರದಿಯು ಕಳೆದ ವರ್ಷದಿಂದ ಹೆಚ್ಚುತ್ತಿರುವ ಆದಾಯ ಮತ್ತು ಸುಧಾರಿತ ಮನೆಯ ಯೋಗಕ್ಷೇಮವನ್ನು ಸೂಚಿಸುತ್ತದೆ. ಸಚಿವಾಲಯದ ಪ್ರಕಾರ, ಗ್ರಾಮೀಣ ಕುಟುಂಬಗಳಲ್ಲಿ ಶೇಕಡ ೮೦ ರಷ್ಟು ಜನರು, ಕಳೆದ ವರ್ಷಕ್ಕೆ ಹೋಲಿಸಿದರೆ ಹೆಚ್ಚಿನ ಬಳಕೆಯನ್ನು ವರದಿ ಮಾಡಿದ್ದಾರೆ. ಮಾಸಿಕ ಆದಾಯದ ಶೇಕಡ ೬೭.೩ ರಷ್ಟನ್ನು ಈಗ ಬಳಕೆಗೆ ಖರ್ಚು ಮಾಡುತ್ತಿದ್ದಾರೆ. ಇದು ಸಮೀಕ್ಷೆ ಪ್ರಾರಂಭವಾದ ನಂತರದ ಅತ್ಯಧಿಕ ಪಾಲಾಗಿದೆ. ಜಿಎಸ್‌ಟಿಯ ದರ ತರ್ಕಬದ್ಧಗೊಳಿಸುವಿಕೆಯಿಂದಾಗಿ ಇದು ಸಂಭವಿಸಿದೆ ಎಂದು ಸಚಿವಾಲಯ ತಿಳಿಸಿದೆ. ಗ್ರಾಮೀಣ ಪ್ರದೇಶದಲ್ಲಿ ಶೇಕಡ ೪೨.೨ ರಷ್ಟು ಕುಟುಂಬಗಳು ಆದಾಯದ ಹೆಚ್ಚಳವನ್ನು ಅನುಭವಿಸಿದ್ದಾರೆ. ಮುಂದಿನ ವರ್ಷ ಶೇಕಡ ೭೫.೯ ರಷ್ಟು ಜನರು ತಮ್ಮ ಆದಾಯದಲ್ಲಿ ಏರಿಕೆಯನ್ನು ನಿರೀಕ್ಷಿಸುತ್ತಿರುವುದರಿಂದ ಇದು ಭವಿಷ್ಯದ ನಿರೀಕ್ಷೆಯನ್ನು ಸಹ ತೋರಿಸುತ್ತದೆ. ನಬಾರ್ಡ್ ದೇಶಾದ್ಯಂತ ಪ್ರತಿ ಎರಡು ತಿಂಗಳಿಗೊಮ್ಮೆ ಈ ಸಮೀಕ್ಷೆಯನ್ನು ನಡೆಸುತ್ತದೆ. ಇದು ಆದಾಯ, ಬಳಕೆ, ಹಣದುಬ್ಬರ, ಸಾಲ ಮತ್ತು ಹೂಡಿಕೆಯಂತಹ ಪ್ರಮುಖ ಸೂಚಕಗಳನ್ನು ಗುರುತಿಸುತ್ತದೆ.

**<>><><*><><<>**

ನೂತನ ಕಾರ್ಮಿಕ ಸಂಹಿತೆಗಳ ಅಡಿಯಲ್ಲಿ ಕಾರ್ಖಾನೆ ಮಾಲೀಕರು ೧೨ ಗಂಟೆಗಳ ಕಾಲ ಕೆಲಸ ಮಾಡುವಂತೆ ಕಾರ್ಮಿಕರನ್ನು ಒತ್ತಾಯಿಸುತ್ತಾರೆ. ಆದರೆ ಅವರಿಗೆ ೮ ಗಂಟೆಗಳ ಕೆಲಸಕ್ಕೆ ಮಾತ್ರ ಸಂಬಳ ಪಾವತಿಸುತ್ತಾರೆ. ಕಾರ್ಮಿಕ ವಿಶ್ರಾಂತಿ ಅವಧಿಯನ್ನು ಈಗ ಕಾರ್ಖಾನೆಗಳು ನಿರ್ಧರಿಸುತ್ತವೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿರುವ ನಕಲಿ ವಿಡಿಯೋವನ್ನು ಕೇಂದ್ರ ಸರ್ಕಾರ ತಳ್ಳಿ ಹಾಕಿದೆ. ಈ ವಿಡಿಯೋದಲ್ಲಿ ಪ್ರಕಟಿಸಿರುವ ಈ ಎರಡು ಹೇಳಿಕೆಗಳು, ನಕಲಿ ಮತ್ತು ಸತ್ಯಕ್ಕೆ ದೂರ ಎಂದು ಭಾರತ ಸರ್ಕಾರದ ವಾರ್ತಾ ಶಾಖೆಯ ಸತ್ಯ ಶೋಧನಾ ಘಟಕ ತಿಳಿಸಿದೆ. ನೂತನ ಕಾರ್ಮಿಕ ಸಂಹಿತೆಗಳ ಅಡಿಯಲ್ಲಿ, ಅಧಿಕಾವಧಿ ಕೆಲಸಕ್ಕೆ ಕಾರ್ಮಿಕರಿಗೆ ಎರಡು ಪಟ್ಟು ವೇತನ ನೀಡಬೇಕು ಮತ್ತು ಅಧಿಕಾವಧಿಗೆ ಕಾರ್ಮಿಕರ ಒಪ್ಪಿಗೆ ಕಡ್ಡಾಯವಾಗಿದೆ. ಕಾರ್ಮಿಕರಿಗೆ ವಿಶ್ರಾಂತಿ ಅವಧಿಯನ್ನು ನಿರ್ಧರಿಸುವ ಅಧಿಕಾರ ಸಂಬಂಧಿತ ಸರ್ಕಾರಕ್ಕಿದ್ದು, ಈ ಅಧಿಕಾರ ಕಾರ್ಖಾನೆ ಮಾಲೀಕರಿಗಿಲ್ಲ ಎಂದು ಪಿಐಬಿ ಸ್ಪಷ್ಟಪಡಿಸಿದೆ. ಅಲ್ಲದೇ ಅಧಿಕೃತ

ಮಾಹಿತಿಗಾಗಿ ಸರ್ಕಾರದ ಅಧಿಕೃತ ಮೂಲಗಳನ್ನು ಮಾತ್ರ ಅವಲಂಬಿಸುವಂತೆ ನಾಗರಿಕರಿಗೆ ಸರ್ಕಾರ ಮನವಿ ಮಾಡಿದೆ.

**<>><><*><><<>**

ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮ-ಯುಎನ್‌ಇಪಿ ೨೦೨೫ರ ಚಾಂಪಿಯನ್ಸ್ ಆಫ್ ದಿ ಅರ್ಥ್ ಪ್ರಶಸ್ತಿಗೆ ತಮಿಳುನಾಡಿನ ಪರಿಸರ, ಹವಾಮಾನ ಬದಲಾವಣೆ ಮತ್ತು ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸುಪ್ರಿಯಾ ಸಾಹು ಭಾಜನರಾಗಿದ್ದಾರೆ. ಸಾಧಾರಣ ಮತ್ತು ಉನ್ನತ ತಂತ್ರಜ್ಞಾನದ ಸಮ್ಮಿಲನದೊಂದಿಗೆ ಸಮಗ್ರ ಆಡಳಿತ ಮತ್ತು ಪ್ರಕೃತಿ ಆಧಾರಿತ ಪರಿಹಾರಗಳು, ಹಸಿರುಮನೆ ಅನಿಲ ಹೊರಸೂಸುವಿಕೆಯನ್ನು ಕಡಿಮೆ ಮಾಡುವ ಜೊತೆಗೆ ದುರ್ಬಲ ಸಮುದಾಯಗಳನ್ನು ಹೇಗೆ ರಕ್ಷಿಸಬಹುದು ಎಂಬುದನ್ನು ಪ್ರದರ್ಶಿಸಲು ಸುಪ್ರಿಯಾ ಸಾಹು ಅವರು ವಿವಿಧ ಉಪಕ್ರಮಗಳನ್ನು ಕೈಗೊಂಡಿರುವುದನ್ನು ಗುರುತಿಸಿ, ಈ ಪ್ರಶಸ್ತಿ ನೀಡಲಾಗಿದೆ.

**<>><><*><><<>**

ನವ ಚಂಡೀಗಢದ ಮುಲ್ಲನ್‌ಪುರದ ಮಹಾರಾಜ ಯಾದವೀಂದ್ರ ಸಿಂಗ್ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ಇಂದು ಭಾರತ ಮತ್ತು ದಕ್ಷಿಣ ಆಫ್ರಿಕಾ ಸರಣಿಯ ಎರಡನೇ ಟಿ-೨೦ ಪಂದ್ಯ ನಡೆಯಲಿದೆ. ಪಂದ್ಯ ಸಂಜೆ ೭ಗಂಟೆಗೆ ಪ್ರಾರಂಭವಾಗಲಿದೆ. ಕಟಕ್‌ನ ಬಾರಾಬತಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಐದು ಪಂದ್ಯಗಳ ಟಿ-೨೦ ಸರಣಿಯ ಮೊದಲ ಪಂದ್ಯದಲ್ಲಿ ಭಾರತ ದಕ್ಷಿಣ ಆಫ್ರಿಕಾವನ್ನು ೧೦೧ ರನ್‌ಗಳಿಂದ ಸೋಲಿಸಿತು.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><><ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ ><><<>**